ಮೂಲ ದಾವಾ ನಂಃ 74/2012

ಡಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **03-03-2023** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ.ಪಿ.ಹೆಗಡೆ ವಕೀಲರಿಂದಃ**

ನಾನು ನನ್ನ ತಾಯಿ ನನ್ನ ತಂಗಿ ಮಂಕಿಯಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತೇವೆ. ಸದ್ರಿ ದಾವಾ ಸ್ಥಳದಲ್ಲಿ ನಮ್ಮ ವಾಸ್ತವ್ಯದ ಮನೆ ಇದೆ. ಸದ್ರಿ ವಾಸ್ತವ್ಯದ ಮನೆಗೆ ಪಂಚಾಯತಿಯ ನಂಬರ್ ಇರುವುದಿಲ್ಲ. ಸದ್ರಿ ವಾಸ್ತವ್ಯದ ಮನೆಯನ್ನು 2008 ರಲ್ಲಿ ಕಟ್ಟಿದ್ದೇವೆ. ಸದ್ರಿ ಮನೆಯನ್ನು ನಮ್ಮ ತಂದೆಯವರು ಕಟ್ಟಿದ್ದು ಪಂಚಾಯಿತಿಯಿಂದ ಅನುಮತಿಯನ್ನು ಪಡೆದಿದ್ದಾರೋ ಇಲ್ಲವೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ತೀರಿಕೊಂಡಾಗ ನನಗೆ ಅಂದಾಜು 11 ವರ್ಷ ಇರಬಹುದು. ನನ್ನ ತಂದೆ ಮರಣ ಹೊಂದಿದ ನಂತರ ನನ್ನ ತಾಯಿಯು ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಈ ಪ್ರಕರಣದಲ್ಲಿ ನನ್ನ ತಾಯಿಗೆ ಸಾಕ್ಷೀ ಹೇಳಲು ಅವರಿಗೆ ಕನ್ನಡ ಸ್ಪಷ್ಟವಾಗಿ ಬರದೇ ಇರುವ ಕಾರಣ ಸಾಕ್ಷೀ ಹೇಳಿಲ್ಲ. ಈಗ ನಮ್ಮ ಕುಟುಂಬದ ಜವಾಬ್ದಾರಿಯನ್ನು ನನ್ನ ತಾಯಿ ಜೊತೆ ನಾವು ನೋಡಿಕೊಳ್ಳುತ್ತಿದ್ದೇವೆ. ಸದ್ರಿ ದಾವಾ ಸ್ವತ್ತಿನಲ್ಲಿ ನನ್ನ ತಂದೆಯವರು ಜೀವಂತ ಇರುವಾಗ ಗೇರು ಬೆಳೆಯನ್ನು ಬೆಳೆಯುತ್ತಿದ್ದರು. ಈಗ ನಾವು ಆ ದಾವಾ ಸ್ವತ್ತಿನಲ್ಲಿ ಗೇರು ಬೆಳೆ ಅದರ ಜೊತೆಗೆ ಸ್ವಲ್ಪ ತೆಂಗಿಣ ಮತ್ತು ಅಡಿಕೆಯನ್ನು ಬೆಳೆಯುತ್ತಿದ್ದೇವೆ . ತೆಂಗು ಮತ್ತು ಅಡಿಕೆ ಬೆಳೆಗೆ ನೀರಿನ ಅಭಾವದ ಕಾರಣ ಫಸಲು ಬಂದಿಲ್ಲ. ತೆಂಗು ಮತ್ತು ಅಡಿಕೆ ಬೆಳೆಯಲು ನೀರಿಗಾಗಿ ಒಂದು ಬಾವಿ ಇದ್ದು ಅದು ಮಾರ್ಚ ಕೊನೆಯ ವೇಳೆ ಬತ್ತಿ ಹೋಗುತ್ತದೆ. ಬಾವಿಯ ನೀರನ್ನು ಕೊಡದಿಂದ ಎತ್ತುತ್ತೇವೆ. ಸದ್ರಿ ಬಾವಿಯನ್ನು ನನ್ನ ತಂದೆಯವರು ಕೊರೆಸಿದ್ದರೋ ಅಥವಾ ದಾವಾ ಸ್ವತ್ತು ಖರೀದಿಸಿದಾಗ ಇತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಕ್ರಯ ಪತ್ರವನ್ನು ನಾವು ತೋರಿಕೆಗಾಗಿ ಮಾಡಿಕೊಂಡಿದ್ದೇವೆ ಅದರ ಕಬ್ಜಾ ನಮ್ಮ ಹತ್ತಿರ ಇಲ್ಲ ಎಂದು ಸೂಚಿಸವುದು ಸರಿಯಲ್ಲ. ಸದ್ರಿ ದಾವಾ ಸ್ವತ್ತನ್ನು ಕ್ರಯ ಮಾಡುವಾಗ ಸರ್ವೇ ಮಾಡಿಯೇ ಖರೀದಿಸಿದ್ದಾರೆ ಎಂಬುದಾಗಿ ನನ್ನ ತಂದೆಯವರು ಹೇಳುತ್ತಿದ್ದರು. ಕ್ರಯ ಪತ್ರದ ಸಂಗತಿಗೆ ನಕಾಶೆಯನ್ನು ಇಟ್ಟಿಲ್ಲ. ನಾವು ಖರೀದಿ ಮಾಡಿದ್ದರ ಸ್ವತ್ತಿನ ನಕಾಶೆಯನ್ನು ಈಗ ನಾನು ನೋಡಿದ್ದೇನೆ. ಸದ್ರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ ಅದು ನಮ್ಮ ವಕೀಲರಿಗೆ ಗೊತ್ತು. ಸದ್ರಿ ನಕಾಶೆಯ ಬಗ್ಗೆ ನಮ್ಮ ವಕೀಲರಿಂದ ನಾನು ಮಾಹಿತಿಯನ್ನು ಪಡೆದುಕೊಂಡಿಲ್ಲ. ಸದ್ರಿ ನಕಾಶೆಯಲ್ಲಿ ಯಾವ ಸರ್ವೇ ನಂಬರ ನಮೂದು ಆಗಿದೆ ಎಂಬುದರ ಬಗ್ಗೆ ನನಗೆ ಗೊತ್ತು. ಈಗ ಸದ್ರಿ ನಕಾಶೆಯಲ್ಲಿ ಸರ್ವೆ ನಂ. 401 ಹಿಸ್ಸಾ 1 ಎಂದು ಇದೆ. ನಮ್ಮ ತಂದೆಯವರು ಖರೀದಿ ಮಾಡುವಾಗ ಆ ನಕಾಶೆಯಲ್ಲಿ ಸರ್ವೆ ನಂ. 401 ಹಿಸ್ಸಾ 2 ಎಂದು ಇತ್ತು. ಸರ್ವೆ ನಂ. 401 ರಲ್ಲಿ ಎಷ್ಟು ಹಿಸ್ಸೆಗಳು ಇದ್ದಾವೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ. 401 ಹಿಸ್ಸಾ 1 ಇದು ನಾವು ಖರೀದಿ ಮಾಡುವ ಮುಂಚೆ ಪ್ರತಿವಾದಿ ನಂ. 1 , 2 ಹಾಗೂ 4 ರವರ ಹೆಸರಿನಲ್ಲಿತ್ತು. ಪ್ರತಿವಾದಿ ನಂ. 3 ರ ಹೆಸರಿನಲ್ಲಿ ಯಾವ ಸರ್ವೆ ನಂ. ಇತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರಸ್ತುತವಾಗಿ ಸರ್ವೇ ನಂ. 401 ಹಿಸ್ಸಾ 2 ಯಾರ ಹೆಸರಿನಲ್ಲಿದೆ ಎಂದು ಕೇಳಿದಾಗ ಸಾಕ್ಷೀಯು ಅದು ಸರ್ವೇ ನಂ. 401 ಹಿಸ್ಸಾ 1 ರಡಿಯಲ್ಲಿಯೇ ಬರುತ್ತದೆ ಎಂದು ನುಡಿದಿದ್ದಾರೆ. ಪ್ರಸ್ತುತವಾಗಿ ಸರ್ವೆ ನಂ. 401 ಹಿಸ್ಸಾ 1 ಎಷ್ಟು ಕ್ಷೇತ್ರವಿದೆ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಸರ್ವೆ ನಂ. 401 ಅನ್ನು ನಮ್ಮನ್ನು ಬಿಟ್ಟು ಬೇರೆ ಯಾರು ಕೊಂಡುಕೊಂಡಿದ್ದಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯ ವಾದಿಯು ಸರ್ವೇ ನಂ. 401 ರಲ್ಲಿ ಸ್ವತ್ತನ್ನು ಖರೀದಿಸಿದ್ದರ ಬಗ್ಗೆ

ನನಗೆ ಗೊತ್ತು ಆದರೆ ಎಷ್ಟು ಕ್ಷೇತ್ರವನ್ನು ಖರೀದಿಸಿದ್ದಾನೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ. 401 ರ ಮೂಲ ಮಾಲ್ಕೀದಾರ ಯಾರು ಎಂಬುದು ನನಗೆ ಗೊತ್ತಿಲ್ಲ. ನಾವು ಸದ್ರಿ ಸ್ವತ್ತನ್ನು ಖರೀದಿಸುವಾಗ ಮೂಲ ಮಾಲ್ಕೀದಾರ ನಡುವೆ ದಾವೆಯು ಈ ನ್ಯಾಯಾಲಯದ ಮುಂದೆ ಇತ್ತು ಎಂಬುದರ ಬಗ್ಗೆ ನನಗೆ ಗೂತ್ತಿಲ್ಲ . ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ದಾಖಲಾತಿಗಳನ್ನು ನೋಡಿ ಮತ್ತು ನನ್ನ ಜಾಗವನ್ನು ಇದಿದ್ದರ ಬಗ್ಗೆ ನೋಡಿ ಬರೆಸಿದ್ದೇನೆ. ಸದ್ರಿ ಸ್ವತ್ತಿನ ಮೂಲ ಮಾಲ್ಕೀದಾರರ ನಡುವೆ ನ್ಯಾಯಾಲಯದಲ್ಲಿ ಇತ್ಯರ್ಥವಾದ ಹಾಗೂ ಇತ್ಯರ್ಥಕ್ಕೆ ಬಂದಿರುವ ದಾವೆಗಳ ಬಗ್ಗೆ ಹೇಳಿ ಬರೆಸಿದ್ದೇನೆ. ನಾನು ಈ ವಿಷಯವನ್ನು ದಾಖಲೆಗಳನ್ನು ನೂಡಿದಾಗ ಗೊತ್ತಾಗಿ ಅದನ್ನು ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ. ಮೂಲ ಮಾಲ್ಕೀದಾರ ನಡುವೆ ಇದ್ದ 2 ಪ್ರಕರಣಗಳ ದಾಖಲೆಗಳನ್ನು ನಾವು ತೆಗೆಸಿ ನೋಡಿದ್ದೇವೆ. ಮೂಲ ದಾವಾ ಸಂಖ್ಯೆ 52/1996 ನ್ಯಾಯಾಲಯದಲ್ಲಿ ಡಿಕ್ರಿ ಆಗಿದ್ದರ ಬಗ್ಗೆ ನಿಮಗೆ ಗೂತ್ತಿತ್ತು ಎಂದು ಕೇಳಿದಾಗ ಸಾಕ್ಷಿಯು ಆ ದಾವೆಯು ಗೌರವಾನ್ವಿತ ಉಚ್ಛ ನ್ಯಾಯಾಲಯದ ಮುಂದೆ ಬಾಕಿ ಇದಿದ್ದರ ಬಗ್ಗೆ ನನಗೆ ಗೂತ್ತಿತ್ತು ಎಂದು ನುಡಿದಿದ್ದಾರೆ. ಈಗ ಆ ಪ್ರಕರಣ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಬಾಕಿ ಇದಿದ್ದರ ಬಗ್ಗೆ ಈಗ ನಮ್ಮ ವಕೀಲರಿಗೆ ಗೊತ್ತಿರಬಹುದು. ಮೂಲ ದಾವಾ ಸಂಖ್ಯೆ 52/1996 ರ ವಿರುದ್ಧ ಹಿರಿಯ ದಿವಾಣಿ ನ್ಯಾಯಾಲಯ ಹೊನ್ನಾವರಕ್ಕೆ ಅಪೀಲ್ ಹೋಗಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಆ ಅಪೀಲು ಕಿತ್ತು ಹೋಗಿದ್ದು ಅದು ನಮಗೆ ಗೊತ್ತಿದ್ದು ಸಹ ಈ ಸ್ವತ್ತನ್ನು ನಾವು ಕೊಂಡುಕೊಂಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ . ಸದ್ರಿ ದಾವಾ ಸ್ವತ್ತಿಗೆ ಯಾವುದೇ ರೀತಿಯ ಸರಿಯಾದ ನಕಾಶೆಯೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾವು 2 ಎಕರೆ 10 ಗುಂಟೆ ಜಮೀನನ್ನು ಆರ್.ಟಿ.ಸಿಯ ಆಧಾರದ ಮೇಲೆ ಅಷ್ಟೇ ಖರೀದಿ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ನಾವು ಖರೀದಿಸುವಾಗ ಆರ್.ಟಿ.ಸಿ ರದ್ದಾಗಿದ್ದು ಅದನ್ನು ತೆಗದುಕೊಂಡು ತಹಶೀಲ್ದಾರ ಆಫೀಸಗೆ ಹೋಗಿ ಮೋಸದಿಂದ ಸದ್ರಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ನ್ಯಾಯಾಲಯದ ಡಿಕ್ರಿ ಇದ್ದರು ಆ ಸ್ವತ್ತನ್ನು ಖರೀದಿ ಮಾಡಿ ಡಿಕ್ರಿಯನ್ನು ಅಮಾನ್ಯ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ನಾವು ಈಗ ಆ ಸ್ವತ್ತನ್ನು ಕಬ್ಜಾ ಮಾಡಲು ಮುಂದಾಗಿದ್ದೇವೆ ಎಂಬ ಕಾರಣಕ್ಕಾಗಿ ದಾವೆಯನ್ನು ಹೂಡಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.